## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಗ್ರಾಮೀಣ ಕುಡಿಯುವ ನೀರಿನ ಪ್ರಸ್ತಾವಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡುವುದು ಮತ್ತು ಟೆಂಡರ್ ಪ್ರಸ್ತಾವಗಳನ್ನು ಅಂಗೀಕರಿಸುವ ಅಧಿಕಾರ ಪ್ರತ್ಯಾಯೋಜನೆ ಕುರಿತು.

ಓದಲಾಗಿದೆ:
1. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪೊ 43 ಗ್ರಾನೀಸ(2) 10, ದಿ:17.8.2010.
2. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 85 ಗ್ರಾನೀಸ(2) 2013, ದಿ:25.11.2013.
3. ಸರ್ಕಾರದ ಸುತ್ತೋಲೆ ಸಂಖ್ಯೆ: ಗ್ರಾಅಪ 131 ಗ್ರಾನೀಸ(2) 14, ದಿ:15.10.2014.

----

**ಪೀಠಿಕೆ:**

ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆಯ ಗ್ರಾಮೀಣ ನೀರು ಪೂರೈಕೆ ಯೋಜನೆಗಳ ಸಮರ್ಪಕ ಹಾಗೂ ಕ್ಷಿಪ್ರ ಅನುಷ್ಠಾನ ಸಲುವಾಗಿ ತಾಂತ್ರಿಕ ಅನುಮೋದನೆ ನೀಡಲು ಹಾಗೂ ಆಡಳಿತಾತ್ಮಕ ಅನುಮೋದನೆ ನೀಡಲು ಈಗಾಗಲೇ ಆರ್ಥಿಕ ಇಲಾಖೆ ಸಹಮತಿ ಪಡೆದು ಮತ್ತು ಆರ್ಥಿಕ ಇಲಾಖೆ ಈಗಾಗಲೇ ಅಧಿಕಾರ ಪ್ರತ್ಯಾಯೋಜನೆ ಮಾಡಿರುವ ಆದೇಶಗಳನ್ವಯ ಮೇಲೆ ಓದಲಾದ ಆದೇಶಗಳಲ್ಲಿ ಮುಖ್ಯ ಇಂಜಿನಿಯರ್, ಅಧೀಕ್ಷಕ ಇಂಜಿನಿಯರ್, ಕಾರ್ಯಪಾಲಕ ಇಂಜಿನಿಯರ್ ಹಾಗೂ ಸಹಾಯಕ ಕಾರ್ಯಪಾಲಕ ಇಂಜಿನಿಯರ್‌ಗಳಿಗೆ ಮತ್ತು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್‌ರವರಿಗೆ ಅಧಿಕಾರ ವಿಕೇಂದ್ರೀಕರಣ ಮಾಡಿ ಆದೇಶ ಹೊರಡಿಸಿದೆ. ಆದರೆ, ಟೆಂಡರ್ ಅಂಗೀಕರಿಸುವ ಪ್ರಾಧಿಕಾರ ಕುರಿತಂತೆ ಸ್ಪಷ್ಟನೆ ಇರುವುದಿಲ್ಲ. ಸಾಮಾನ್ಯವಾಗಿ ಅಧಿಕಾರ (delegation of powers) ಪ್ರತ್ಯಾಯೋಜನೆ ನಿಯಮಗಳಂತೆ ಟೆಂಡರ್ ಪ್ರಕಟಣೆ ಹೊರಡಿಸುವ ಅಥವಾ ಮುಖ್ಯ ಇಂಜಿನಿಯರ್‌ಗಳ ಹಂತದಲ್ಲಿ ಟೆಂಡರ್‌ಗಳನ್ನು ಒಪ್ಪಿಕೊಳ್ಳುವುದು ತಿಳಿದು ಬಂದಿದೆ. ಇದರಿಂದ ಯಾವ ಕಾಮಗಾರಿ ಅನುಮೋದನೆಯಾಗಿದೆ ಮತ್ತು ವಾಸ್ತವಿಕ ಅಂದಾಜಿನ ಸಮರ್ಥನೆ ಹಾಗೂ ಧೃಡೀಕರಣ ಆಯಾ ಜಿಲ್ಲಾ ಪಂಚಾಯತ್ ಮುಖ್ಯಸ್ಥರಿಂದ ಆದಂತಾಗುವುದಿಲ್ಲ. ಜೊತೆಗೆ, ನಿರೀಕ್ಷಿತ ಆಡಳಿತ ಮತ್ತು ಆರ್ಥಿಕ ಶಿಸ್ತನ್ನು ಸಾರ್ವಜನಿಕ ಹಿತದೃಷ್ಟಿಯಿಂದ ಪಾರದರ್ಶಕತೆಯಲ್ಲಿ ನಿರ್ವಹಣೆ ಮಾಡುವ ಅಗತ್ಯತೆಯಿದೆ. ಆದುದರಿಂದ, ಜಿಲ್ಲಾ ಪಂಚಾಯತ್ ಮುಖ್ಯಸ್ಥರಿಗೆ ಪ್ರತಿ ಕಾಮಗಾರಿಯ ಆಡಳಿತಾತ್ಮಕ ಅನುಮೋದನೆಯನ್ನು ರೂ.100ಲಕ್ಷ ಮಿತಿಯವರೆಗೆ ಮಾಡಲು ಅಧಿಕಾರ ನೀಡಿರುವುದರಿಂದ ತತ್ಸಂಬಂಧದ ಟೆಂಡರ್ ದಸ್ತಾವೇಜುಗಳನ್ನು ಒಪ್ಪಿಕೊಳ್ಳುವ / ಅಂಗೀಕರಿಸುವ ಅಧಿಕಾರವನ್ನು ಸಹ ನೀಡಲು ಸರ್ಕಾರ ನಿರ್ಧರಿಸಿದೆ. ಆದುದರಿಂದ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 29 ಗ್ರಾನೀಸ(2) 2015 ಬೆಂಗಳೂರು, ದಿನಾಂಕ: 16.3.2015**

ಪೀಠಿಕೆಯಲ್ಲಿನ ವಾಸ್ತವಾಂಶಗಳ ಹಿನ್ನೆಲೆಯಲ್ಲಿ, ಈಗಾಗಲೇ ಗೊತ್ತುಪಡಿಸಿರುವ ಟೆಂಡರ್ ಅಂಗೀಕಾರ ಪ್ರಾಧಿಕಾರವನ್ನು ಗ್ರಾಮೀಣ ಕುಡಿಯುವ ನೀರು ಪೂರೈಕೆ ಯೋಜನೆಗಳ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಗೊತ್ತುಪಡಿಸಿ ತಕ್ಷಣದಿಂದ ಹಾಗೂ ಮುಂದಿನ ಆದೇಶದವರೆಗೆ KTPP ಸೆಕ್ಷನ್:9ರನ್ವಯ ಕೆಳಕಂಡಂತೆ ಅಧಿಕಾರ ಪ್ರತ್ಯಾಯೋಜನೆ ಮಾಡಿ ಆದೇಶ ಹೊರಡಿಸಿದೆ.

- ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್‌ಗಳಿಗೆ ಪ್ರತಿ ಪ್ರಕರಣದಲ್ಲಿ ಸರ್ಕಾರದಿಂದ **ಅನುಮೋದನೆಯಾಗಿರುವ ಕ್ರಿಯಾ ಯೋಜನೆ ಮತ್ತು ಹಂಚಿಕೆಯಾಗಿರುವ ಅನುದಾನದ ಮಿತಿಯೊಳಗೆ ಆಡಳಿತಾತ್ಮಕ ಅನುಮೋದನೆ ನೀಡಲು ಅಧಿಕಾರ ಹೊಂದಿರುತ್ತಾರೆ.**
- ಈ ಅಧಿಕಾರ ಪ್ರತ್ಯಾಯೋಜನೆಯೊಳಗೆ **ರೂ.10ಲಕ್ಷದ** ಮೇಲ್ಪಟ್ಟಿರುವ ಮತ್ತು ಗರಿಷ್ಠ **ರೂ.100ಲಕ್ಷ**ವರೆಗಿನ ಗ್ರಾಮೀಣ ನೀರು ಪೂರೈಕೆ ಕಾಮಗಾರಿಗಳ ಪ್ರಕರಣದಲ್ಲಿ **ಟೆಂಡರ್ ಅಂಗೀಕರಿಸುವ ಅಧಿಕಾರವನ್ನು** ಕೆಳಕಂಡ ಸಮಿತಿ ಹೊಂದಿರುತ್ತದೆ.

| | | |
|---|---|---|
| 1. | ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್ | ಅಧ್ಯಕ್ಷರು |
| 2. | ಜಿಲ್ಲಾ ಪಂಚಾಯತ್‌ನಲ್ಲಿ ಗ್ರಾಮೀಣ ಕುಡಿಯುವ ನೀರಿನ ವಿಷಯ ವಹಿಸಿರುವ ಉಪ ಕಾರ್ಯದರ್ಶಿ | ಸದಸ್ಯರು |
| 3. | ಮುಖ್ಯ ಲೆಕ್ಕಾಧಿಕಾರಿ, ಜಿಲ್ಲಾ ಪಂಚಾಯತ್ | ಸದಸ್ಯರು |
| 4. | ಕಾರ್ಯಪಾಲಕ ಇಂಜಿನಿಯರ್, PRED | ಸದಸ್ಯರು |
| 5. | ಕಾರ್ಯಪಾಲಕ ಇಂಜಿನೀಯರ್, RDWSD | ಸದಸ್ಯ ಕಾರ್ಯದರ್ಶಿ |

.....2

2. ಮೇಲ್ಕಂಡ ಟೆಂಡರ್ ಅನುಮೋದನೆ ಸಮಿತಿ ಗ್ರಾಮೀಣ ನೀರು ಸರಬರಾಜು ಇಂಜಿನಿಯರ್‌ರಿಂಗ್ ವಿಭಾಗದಿಂದ ಸ್ವೀಕೃತಿಯಾಗುವ ಟೆಂಡರ್ ಪ್ರಸ್ತಾಪಗಳನ್ನು ಜಾಗ್ರತೆಯಾಗಿ ಪರಿಶೀಲಿಸಿ ನಿಯಮಾನುಸಾರ ವಿಳಂಬ ಮಾಡದೆ ಅನುಮೋದನೆ ನೀಡಬೇಕು. ಈ ಸಲುವಾಗಿ ಗ್ರಾಮೀಣ ನೀರು ಪೂರೈಕೆ ಯೋಜನೆಗಳ ಟೆಂಡರ್ ಮಂಜೂರಾತಿ ಸಲುವಾಗಿ ಪ್ರತಿ ಮಾಹೆ ಕನಿಷ್ಠ 2 ಭಾರಿ ಸಭೆ ಸೇರಲು ಕಾಲಕಾಲಿಕ ಆಂತರಿಕ ವೇಳಾ ಪಟ್ಟಿಯನ್ನು ಮುಂಚಿತವಾಗಿ ಪ್ರಕಟಿಸಿಕೊಳ್ಳತಕ್ಕದ್ದು.

3. ಈ ಟೆಂಡರ್ ಅಂಗೀಕರಣ ಸಮಿತಿಯು ಆಯಾ **ಯೋಜನಾ ಕಾಮಗಾರಿಯ ಅನುಮೋದಿತ ಮೊತ್ತಕ್ಕಿಂತ** ಗರಿಷ್ಠ **5% ಟೆಂಡರ್ ಪ್ರೀಮಿಯಂರವರೆಗೆ ಟೆಂಡರ್ ಪ್ರಸ್ತಾಪಗಳನ್ನು ಅನುಮೋದಿಸಲು ಅಧಿಕಾರ ಹೊಂದಿರುತ್ತದೆ.**

4. ಈ ಆದೇಶವನ್ನು KTPP ಕಾಯ್ದೆಯ ನಿಯಮ(9)ರ ಪ್ರಕಾರ ಹಾಗೂ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ IFA ರವರ ಸಹಮತಿ ಸಂಖ್ಯೆ: **ಗ್ರಾಅಪ 198 ಆಂಆಸ, 8574, ದಿನಾಂಕ:9.3.2015, ಕಂಡಿಕೆ:3ರನ್ವಯ** ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

16/3/15

(ರಾಮಕೃಷ್ಣ)
ಸರ್ಕಾರದ ಉಪ ಕಾರ್ಯದರ್ಶಿ(ಗ್ರಾನೀಸ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ
ಇಮೇಲ್:rk3452000@gmail.com
ಫೋನ್:22240508, ಫ್ಯಾಕ್ಸ್:22203175

ಪ್ರತಿಗಳು:

1. ಮಹಾಲೇಖಪಾಲರು (ಲೆಕ್ಕಪತ್ರ) ಕರ್ನಾಟಕ, ಬೆಂಗಳೂರು.
2. ಮಹಾಲೇಖಪಾಲರು (ಎಯು-1) ಕರ್ನಾಟಕ, ಬೆಂಗಳೂರು.
3. ಮಹಾಲೇಖಪಾಲರು (ಎಯು-2) ಕರ್ನಾಟಕ, ಬೆಂಗಳೂರು.
4. ಉಪ ಮಹಾಲೇಖಪಾಲರು, ಮಹಾಲೇಖಪಾಲರು (ಎಯು-1) ರವರ ಶಾಖಾ ಕಛೇರಿ, ಕಾಲೇಜು ರಸ್ತೆ, ಧಾರವಾಡ.
5. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
6. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
7. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
8. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಯೋಜನಾ ಇಲಾಖೆ ಇವರ ಆಪ್ತ ಕಾರ್ಯದರ್ಶಿ, ಬೆಂಗಳೂರು.
9. ವಿಶೇಷಾಧಿಕಾರಿ (ಜಿಪಂ) ಹಾಗೂ ಸರ್ಕಾರದ ಪದನಿಮಿತ್ತ ಉಪಕಾರ್ಯದರ್ಶಿ, ಆರ್ಥಿಕ ಇಲಾಖೆ, ಬೆಂಗಳೂರು-1.
10. ಸರ್ಕಾರದ ಅಧೀನ ಕಾರ್ಯದರ್ಶಿ, ವೆಚ್ಚ (6) (ಜಿಪಂ) ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
11. ಮುಖ್ಯ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, 2ನೇ ಮಹಡಿ, ಕಾವೇರಿಭವನ, ಬೆಂಗಳೂರು-09.
12. ರಾಜ್ಯದ ಎಲ್ಲಾ (30) ಜಿಲ್ಲಾ ಪಂಚಾಯತ್‌ಗಳ ಅಧ್ಯಕ್ಷರುಗಳು.
13. ರಾಜ್ಯದ ಎಲ್ಲಾ ಜಿಲ್ಲಾ (30) ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು / ಮುಖ್ಯ ಲೆಕ್ಕಾಧಿಕಾರಿಗಳು.
14. ರಾಜ್ಯದ ಎಲ್ಲಾ (4) ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವೃತ್ತಗಳ ಅಧೀಕ್ಷಕ ಅಭಿಯಂತರುಗಳು.
15. ಎಲ್ಲಾ (38) ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗಗಳ ಕಾರ್ಯಪಾಲಕ ಇಂಜಿನಿಯರ್‌ಗಳು.
16. ಎಲ್ಲಾ (38) PRED ವಿಭಾಗಗಳ ಕಾರ್ಯಪಾಲಕ ಇಂಜಿನಿಯರ್‌ಗಳು.
17. ಮುಖ್ಯ ಲೆಕ್ಕಾಧಿಕಾರಿಗಳು, ಮುಖ್ಯ ಇಂಜಿನಿಯರ್ RWSSD ಕೇಂದ್ರ ಕಛೇರಿ, ಬೆಂಗಳೂರು.
18. ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ಅಪರ ಮುಖ್ಯ ಕಾರ್ಯದರ್ಶಿ / ಕಾರ್ಯದರ್ಶಿ (ಪಂ.ರಾಜ್) ಇವರ ಆಪ್ತ ಕಾರ್ಯದರ್ಶಿಗಳು.
19. ಆಯುಕ್ತರು, RWSSD ಮತ್ತು ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ / ಆಂತರಿಕ ಆರ್ಥಿಕ ಸಲಹೆಗಾರರು / ಅಪರ ನಿರ್ದೇಶಕರು, ಆರ್ಥಿಕ, RDPR ಇಲಾಖೆ ಇವರುಗಳ ಆಪ್ತ ಸಹಾಯಕರು.
20. ನಿರ್ದೇಶಕರು, ಶ್ರೀ ಅಬ್ದುಲ್ ನಜೀರ್‌ಸಾಬ್‌ರವರ ಗ್ರಾಮೀಣಾಭಿವೃದ್ಧಿ ರಾಜ್ಯ ಸಂಸ್ಥೆ, ಲಲಿತ್ ಮಹಲ್ ರಸ್ತೆ, ಮೈಸೂರು.
21. ಮುಖ್ಯ ಸಂಪಾದಕರು ಮತ್ತು ಸಂಪರ್ಕಾಧಿಕಾರಿ "ಕರ್ನಾಟಕ ವಿಕಾಸ" ಗ್ರಾಅಪಂ.ರಾಜ್ ಇಲಾಖೆ, ಬೆಂಗಳೂರು.
22. ಶಾಖಾಧಿಕಾರಿ, ರವಾನೆ ಮತ್ತು ಸ್ವೀಕೃತಿ ಶಾಖೆ, ಗ್ರಾಅಪಂ.ರಾಜ್ ಇಲಾಖೆ (ವಾರದ ಗೆಜೆಟ್‌ನಲ್ಲಿ ಪ್ರಕಟಿಸಲು 5 ಪ್ರತಿಗಳು).
23. ರಾಜ್ಯ ಪತ್ರಾಗಾರ ಇಲಾಖೆ (ಬಿಡಿ ಪ್ರತಿ ಶಾಖೆ).
24. ಗ್ರಾಅಪಂ.ರಾಜ್ ಇಲಾಖೆಯ ಮಾಹಿತಿ ಕೇಂದ್ರ (10 ಪ್ರತಿಗಳು).
25. ಶಾಖಾ ರಕ್ಷಾ ಕಡತ: ಹೆಚ್ಚುವರಿ ಪ್ರತಿಗಳು.